ಶ್ರೀ ಕೆ. ವೆಂಕಟರಾಮಯ್ಯ,— ಖಾಸಗೀ ಬಸ್ಸಿನವರು ಹೆಚ್ಚು ಹೆಚ್ಚು ಹಣ ಸಂಪಾದನೆ ಮಾಡು ತ್ತಿರುವಾಗ, ಸರ್ಕಾರಕ್ಕೆ ಲಾಸ್ ಆಗುತ್ತದೆಯೆಂದರೆ ಜನ ಏನು ಅಂತಾರೆ ?

ಶ್ರೀ ಆರ್. ಗುಂಡೂರಾವ್.— ರಾಷ್ಟ್ರೀಕರಣ ಮಾಡಿದ ಮೇಲೆ ಏನು ತೊಂದರೆಯಿದೆ ಎನ್ನು ವುದನ್ನು ನೋಡುತ್ತಿದ್ದೇವೆ. ಆದಷ್ಟು ಜಾಗ್ರತೆ ಮಾಡುವುದಕ್ಕೆ ಸಾಧ್ಯವಿಲ್ಲ, ನಿಧಾನಕ್ಕೆ ಮಾಡಬೇಕೂಂತ ನೋಟೀಸ್ ಹೊರಡಿಸಿದ್ದೇವೆ.

ಶ್ರೀ ಕೆ. ವೆಂಕಟರಾಮಯ್ಯ.— ಸಾಧ್ಯವಿಲ್ಲ ಅಂದರೆ ಹೇಗೆ ? ಸರ್ಕಾರಕ್ಕೆ ನಡೆಸುವುದಕ್ಕೆ ಶಕ್ತಿ ಇಲ್ಲ ಎಂದು ಜನ ಭಾವಿಸುವುದಿಲ್ಲವೆ ?

ಶ್ರೀ ಆರ್. ಗುಂಡೂರಾವ್.— ಸರ್ಕಾರಕ್ಕೆ ಶಕ್ತಿಯಿಲ್ಲಂತ ಜನ ಭಾವಿಸುವುದಿಲ್ಲ,

ಅಧ್ಯಕ್ಷರು :—ಶ್ರೀ ಎ. ಬಸವರಾಜ ಪಾಟೀಲ್ ಅವರ ಪ್ರಶ್ನೆಯ ನಂ. ೬೪೩ ತಡೆಹಿಡಿಯಲಾಗಿದೆ.

Rural Communication roads in Kunigal Taluk, Tumkur District.

704. SRI D. T. MAYANNA (Huliyurdurga) :—Will the Minister for rural Development and Panchayati Raj be pleased to state :—

(a) The names of villages in Kunigal Taluk, Tumkur District where there are no rural roads;

(b) the steps taken by the Government for forming roads in these villages ;

(c) the period thin which these roads will be completed ?

SRI K. PRABHAKAR (Minister for Rural Development and Panchayeti Raj).—

(a) The list is placed on table of the House**

(b) There are pedestrian crossings and cart track roads in these villages at present. The taluk development board has by providing Rs. 50,000/- has taken up and completed 10 roads. The Taluk Development Board has taken suitable action to provide roads in the remaining villages.

(c) Suitable action is being taken by Taluk Development Board.

ಶ್ರೀ ಡಿ. ಟಿ. ಮಾಯಣ್ಣ :—ಸ್ವಾಮಿ, ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ೫೦ ಸಾವಿರ ರೂಪಾಯಿಗಳನ್ನು ಒದಗಿಸಿ ೧೦ ರಸ್ತೆಗಳನ್ನು ಪ್ರಾರಂಭ ಮಾಡಿ ಮುಗಿಸಿದ್ದಾರೆಂದು ತಿಳಿಸಿದ್ದೀರಿ. ಅವ ಯಾವ ರಸ್ತೆಗಳು ಸ್ವಾಮಿ.

†ಶ್ರೀ ಕೆ. ಪ್ರಭಾಕರ್ :— ೧. ದತ್ತೂರ ದೊಡ್ಡಪಾಳ್ಯ ರಸ್ತೆ, ೨. ಎಲಗಲವಾಡಿ ರಸ್ತೆ, ೩. ಕಳವಾಡಪಾಳ್ಯದಿಂದ ಸಿ. ಎ. ಪಾಳ್ಯ, ಪುಳರಿಪಾಳ್ಯದ ಮಾರ್ಗ, ೪. ಕಡರಾಮನಹಳ್ಳಿಯಿಂದ ಪುಟ್ಟಂಬಿಳ್ಳ ರಸ್ತೆ, ೫. ಜೀವನಹಟ್ಟಿ ರಸ್ತೆ, ೬, ಅವರೇಗೆರೆ ರಸ್ತೆ. ೭. ಸೂಗನಹಳ್ಳಿ ರಸ್ತೆಯಿಂದ ಕಾವರಹಟ್ಟಿ ರಸ್ತೆ, ೮. ನಾಗರಹಳ್ಳಿ ರಸ್ತೆ,, ೯. ಸಿಕ್ಕರಾಮಪಾಳ್ಯರಸ್ತೆ, ಸೀಗೇಪಾಳ್ಯದಿಂದ ಇಪ್ಪಾಡಿ ರಸ್ತೆ ಸೇರುವವರೆಗೆ.

**copy placed in the Karnataka Legislature Library vide No. 21/ Dated 3-5-79.

ಶ್ರೀ ಡಿ. ಟಿ. ಮಾಯಣ್ಣ :—ಸ್ವಾಮಿ, ಇಲ್ಲಿ ನನಗೆ ಕೊಟ್ಟಿರುವ ಲಿಸ್ಟ್ ಪ್ರಕಾರ ೬೦ ಗ್ರಾಮಗಳಿವೆ. ಅವುಗಳನ್ನೆಲ್ಲಾ ಎಷ್ಟು ದಿವಸದಲ್ಲಿ ಮುಗಿಸುತ್ತೀರಾ ಎಂದರೆ ತಾಲ್ಲೂಕು ಬೋರ್ಡಿನವರು ಕೆಲವು ಗ್ರಾಮ ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಾ. ಈಗ ಸರ್ಕಾರದಿಂದ ದುಡ್ಡು ಒದಗಿಸಿ ಈ ೬೦ ಗ್ರಾಮಗಳಿಗೂ ರಸ್ತೆಗಳನ್ನು ಮಾಡಿಸುತ್ತೀರಾ?

ಶ್ರೀ ಕೆ. ಪ್ರಭಾಕರ್ :—ಈ ಗ್ರಾಮಗಳಿಗೆಲ್ಲಾ ಸರ್ಕಾರದವರೇ ಮಾಡುವುದಿಲ್ಲ. ಪ್ರತಿ ತಾಲ್ಲೂಕು ಬೋರ್ಡ್‌ನವರು ಕೂಡ ಹಣ ಒದಗಿಸಿದ್ದಾರೆ. ಸ್ಥಳಾವಮಾನ ಅನುಸರಿಸಿ ಮಾಡುವುದೂ ತಾಲ್ಲೂಕು ಬೋರ್ಡ್‌ನವರಿಗೆ ಸೇರಿದ್ದು.

Bunk Shops at Majestic Bus Stand

771. SRI T. R. SHAMANNA (Basavangudi) :—Will the Minister for Municipal Administratian be pleased to state :—

(a) whether it has come to the notice of the Government that large number of Bunk Shops have come up at the Majestic, Bangalore City Bus Stand in Tank Bund Road ;

(b) are they authorised or unauthorised ;

(c) will the Government allow these ugly Bunk shops permanently ?

SRI H. C. SRIKANTAIAH (Minister for Municipal Administration).—

(a) Yes.

(b) Some are authorised and some are unauthorised.

(c) No. Alternative land for shifting of these venders is being examiend.

ಶ್ರೀ ಟಿ. ಆರ್. ಶಾಮಣ್ಣ :—ಸ್ವಾಮಿ, ಈಗ ಬೆಂಗಳೂರು ಟ್ಯಾಂಕ್‌ಬಂಡ್ ರಸ್ತೆಗೆ ಒಂದು ಕಡೆ ಬಸ್ ನಿಲ್ದಾಣ, ಮತ್ತೊಂದು ಕಡೆ ರೈಲ್ವೆ ನಿಲ್ದಾಣ ಇರುವುದರಿಂದ ಹೊರಗಿನಿಂದ ಬರತಕ್ಕ ಪ್ರಯಾಣಿಕರು ಬೆಂಗಳೂರಿಗೆ ಬಂದ ತಕ್ಷಣ ಅಸಹ್ಯಕರವಾದ ಪೆಟ್ಟಿಗೆ ಅಂಗಡಿಗಳನ್ನು ನೋಡಿ ಬೆಂಗಳೂರು ಆಂದ ಚಿಂದದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಬೇಜಾರಾಪಡುವುದಿಲ್ಲವೇ?

†ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಅಧ್ಯಕ್ಷರೆ, ಈ ಪೆಟ್ಟಿಗೆ ಅಂಗಡಿಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಆಗಿವೆ. ಆದರಲ್ಲಿ ಕೆಲವಕ್ಕೆ ಪರವಾನೆ ಪಡೆದಿದ್ದಾರೆ, ಇನ್ನು ಕೆಲವಕ್ಕೆ ಪರವಾನೆ ಪಡೆದಿಲ್ಲ. ಅನ್ ಅಥರೈಸ್ಡ್ ಆಗಿ ಕಟ್ಟಿಸಿದ್ದಾರೆ. ಈಗ ನಾವು ಅವರನ್ನು ಎವಿಕ್ಟ್ ಮಾಡಿಸಿ ಬೇರೆ ಸ್ಥಳದಲ್ಲಿ ನಿವೇಶನ ಕೊಡಬೇಕೆಂದು ನಾವು ಕೆ.ಎಸ್.ಆರ್.ಟಿ.ಸಿ. ಅವರ ಹತ್ತಿರ ೬ ಅಡಿ ಮತ್ತು ೮ ಅಡಿ ಸೈಜಿನ ೬೭ ಸೈಟುಗಳನ್ನು ಮಿಂಗಡಿಸಲಿಕ್ಕೆ ಕೇಳಿದ್ದೆವು. ಈಗ ಕೆ.ಎಸ್.ಆರ್.ಟಿ.ಸಿ. ಅವರು ನಮಗೆ ಬೇಕು ಎಂದು ಕೊಟ್ಟಿಲ್ಲ. ಈಗ ಬೇರೆ ಕಡೆ ರೀಹೆಬಿಲಿಟೇಟ್ ಮಾಡಲಿಕ್ಕೆ ಸ್ಥಳವನ್ನು ಪರಿಶೀಲನೆ ಮಾಡಿ ಅವರನ್ನು ಖಾಲಿ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ.ಆರ್. ಶಾಮಣ್ಣ :—ಸ್ವಾಮಿ, ಕಳೆದ ಎರಡು ವರ್ಷಗಳ ಕೆಳಗೆ ಅಲ್ಲಿದ್ದಂತಹ ಪೆಟ್ಟಿಗೆ ಅಂಗಡಿಗಳನ್ನು ಕಿತ್ತುಹಾಕಿದಿರಿ. ಆದು ಆದಮೇಲೆ ಹೊಸದಾಗಿ ಅನೇ ಪೆಟ್ಟಿಗೆ ಅಂಗಡಿಗಳು ಬಂದಿರುವುದು ಸರ್ಕಾರದ ಗಮನದಲ್ಲಿದೆಯೇ? ಈ ಪೆಟ್ಟಿಗೆ ಅಂಗಡಿಗಳಿಗೆ ಪರವಾನೆ ಕೊಡತಕ್ಕವರು ಕಾರ್ಪೊರೇಷನ್ನಿನವರೋ, ಬಿ.ಡಿ.ಎ. ಅವರೋ ಅಥವಾ ಕೆ.ಎಸ್.ಆರ್.ಟಿ.ಸಿ. ಅವರೋ ತಿಳಿಸಬೇಕು?